ದಿನಾಂಕಃ 01-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ನನಗೆ ಹೊಸಕೆರೆ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಯಾವುದೇ ಆಸ್ತಿ ಇಲ್ಲ. ನಾನು ವಾಸಮಾಡುತ್ತಿರುವ ಗ್ರಾಮಕ್ಕೂ ದಾವಾಸ್ತಿಗೂ ಸುಮಾರು 3 ಕಿ ಮೀ ಅಂತರವಿದೆ. ನನಗೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನೋಟಿಸು ಬಂದಿದೆ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನ್ನನ್ನು ವಾದಿ ಅವರ ಜಾಗದ ಕುರಿತು ಸಾಕ್ಷ್ಯ ನುಡಿಯಲು ಕರೆತಂದಿರುತ್ತಾರೆ. ಸದರಿ ವಿಚಾರವನ್ನು ನನಗೆ ಒಂದು ತಿಂಗಳ ಮುಂಚೆ ತಿಳಿಸಿರುತ್ತಾರೆ. ಸದರಿ ಸಮಯಕ್ಕೂ ಮುನ್ನ ನನಗೆ ದಾವಾಸ್ತಿಯ ಕುರಿತು ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ದಾವಾಸ್ತಿಯ ವಿವರ ನನಗೆ ಗೊತ್ತಿಲ್ಲ. ಹಾಗಾಗಿ ವಾದಿ ಕೊಟ್ಟ ಮಾಹಿತಿ ಮೇರೆಗೆ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ದಾವಾಸ್ತಿಯ ಕುರಿತು ನಾನು ಯಾವುದೇ ಪಂಚಾಯತಿ ದಾಖಲೆಗಳನ್ನು ನೋಡಿಲ್ಲ. ದಾವಾಸ್ತಿಯ ಅಳತೆಯನ್ನು ನನ್ನ ಸಮಕ್ಷಮ ಯಾವತ್ತಿಗೂ ಮಾಡಿಲ್ಲ. ನಾನು 1ನೇ ಪ್ರತಿವಾದಿಯ ಕಟ್ಟಡವನ್ನು ನೋಡಿರುತ್ತೇನೆ. ಸದರಿ ಕಟ್ಟಡ ಆರ್ ಸಿ ಸಿ ಬಿಲ್ಡಿಂಗ್ ಎಂದರೆ ಸರಿ. 1981-82 ರಿಂದ ಸದರಿ ಕಟ್ಟಡದಲ್ಲಿ 1ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ. ಸಾಕ್ಷಿಗೆ ಈಗ ನಿಡಿ-2 ನ್ನು ತೋರಿಸಲಾಗಿ ಸದರಿ ನಿಡಿ-2ರಲ್ಲಿ ಕಾಣಿಸುತ್ತಿರುವ ಆರ್ ಸಿ ಸಿ ಕಟ್ಟಡ 1 ನೇ ಪ್ರತಿವಾದಿಯದು ಎಂದು ಹಾಗೂ ಸದರಿ ಕಟ್ಟಡದ ಪಕ್ಕದಲ್ಲಿರುವ ಹೆಂಚಿನ ಮನೆ ವಾದಿಯದು ಎಂದು ನೋಡಿ ಗುರುತಿಸಿರುತ್ತಾರೆ.

ಸದರಿ ನಿಡಿ-2ರಲ್ಲಿ ಕಾಣಿಸುತ್ತಿರುವಂತೆ 1 ನೇ ಪ್ರತಿವಾದಿಯ ಆರ್ ಸಿ ಸಿ ಕಟ್ಟಡದ ಸಜ್ಜೆ ಓಣಿಯನ್ನು ಆವರಿಸಿದೆ ಎಂದರೆ ಸರಿ. ಹಾಗಾಗಿ ನನಗೆ ವಾದಿಯ ಮತ್ತು ಪ್ರತಿವಾದಿಗಳ ಆಸ್ತಿಗಳ ಅಳತೆ ಕುರಿತು ಯಾವುದೇ ನಿಖರವಾದ ಮಾಹಿತಿ ಇಲ್ಲ ಎಂದರೆ ಸರಿ. ನಾನು ನೋಡಿದಂತೆ ವಾದಿಯ ಮನೆಯ ಉತ್ತರ ದಿಕ್ಕಿನ ಗೋಡೆಗೆ ಬಾಗಿಲುಗಳಾಗಲಿ ಕಿಟಕಿಗಳಾಗಲಿ ಇಲ್ಲ ಎಂದರೆ ಸರಿಯಲ್ಲ. ಸದರಿಯವರಿ ಮನೆಯ ಹಿಂಭಾಗದಲ್ಲಿ ಬಾಗಿಲು ಇದು ಉತ್ತರ ದಿಕ್ಕಿಗೆ ಯಾವುದೇ ಬಾಗಿಲು ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ನಮೂದಿಸಿದ 3 ಅಡಿ ಖಾಲಿ ಜಾಗ ಯಾವ ಆಸ್ತಿ ಮತ್ತು ಖಾತೆಗೆ ಸಂಬಂಧಿಸಿದ್ದು ಎಂದು ನನಗೆಹೇಳಲಾಗುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.